KAN 301.1 Reg. No. ...................................

# ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎ./ಬಿ.ಎಸ್.ಡಬ್ಲ್ಯೂ ಪದವಿ ಪರೀಕ್ಷೆ

## ಅಕ್ಟೋಬರ್ – 2012

## ಕನ್ನಡ ಭಾಷಾ ಪತ್ರಿಕೆ – 3

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯಭಾಗವನ್ನು ಸಂದರ್ಭ ಸಹಿತ ವಿಶ್ಲೇಷಿಸಿ. 1X5=05

1) ಆದಿಯೊಳವರಂ ಪಿರಿದೊಂ
ದಾದರದಿಂ ನಡಪಿದಜ್ಜರಪ್ಪುದರಿಂದಂ !
ಕಾದರಿವರವರೊಳವರುಂ
ಕಾದರ ನೆರೆದಿವರೊಳೆಂತು ನಂಬುವೆ ನೃಪತೀ !!

2) ಮನೆಯೊಳಗೆ ಮನೆಯೊಡೆಯನಿದ್ದಾನೋ, ಇಲ್ಲವೊ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ?
ಇಲ್ಲ, ಕೂಡಲ ಸಂಗಮದೇವಾ !

ಆ) ಎರಡು ಸಾಲುಗಳಿಗೆ ಸಂದರ್ಭಸಹಿತ ವಿವರಣೆ ನೀಡಿ. 2X3=06

1) ನಾಲಗೆ ಕುಲಮಂ ತುಬ್ಬುವವೋಲುರದೆ ನೀಂ ಕೆಡುನುಡಿವೈ.
2) ಎನ್ನುರುಮಂ ಮತಿಗೆಡಿಪುದು ಚೋದ್ಯಮಲ್ತು ಮದನೋನ್ಮಾದಂ
3) ಸವಿದು ಮೆದ್ದರೊ ಯಾರೂ ಪೂರ್ವದಿ ಹುಲಿಯ ಹಾಲಿನ ಮೇವನು.

ಇ) ಒಂದು ಪ್ರಶ್ನೆಗೆ ಉತ್ತರಿಸಿ. 1X10=10

1) ಕೌರವನ ಪಡೆಯಲ್ಲಿರುವ ಒಡಕಿನ ಧ್ವನಿಗಳನ್ನು ಪಂಪ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.
2) ರಾವಣನ ಉದಾತ್ತ ವ್ಯಕ್ತಿತ್ವವನ್ನು ಉಪರಂಭೆಯ ಆಖ್ಯಾನದಲ್ಲಿ ನಾಗಚಂದ್ರ ಕವಿ ಹೇಗೆ ಅನಾವರಣಗೊಳಿಸಿದ್ದಾನೆ? ವಿವೇಚಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿ. 1X7=07

1) ಲಿಂಗ ಪತಿ– ಶರಣಸತಿ ಭಾವವು ಅಕ್ಕ ಮಹಾದೇವಿಯ ವಚನಗಳಲ್ಲಿ ಹೇಗೆ ಚಿತ್ರಿತವಾಗಿದೆ? ವಿಶ್ಲೇಷಿಸಿ.
2) ಕೊಡವರ ಪರಂಪರೆ ಹಾಗೂ ಪರಾಕ್ರಮವನ್ನು ಹುತ್ತರಿ ಹಾಡು ಕವನದಲ್ಲಿ ಹೇಗೆ ವರ್ಣಿಸಲಾಗಿದೆ? ವಿವರಿಸಿ.

II. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1X10=10

1) ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಗಿಂತಲೂ ಭಾರತದ ಅಸ್ಪೃಶ್ಯತೆ ಅತ್ಯಂತ ಅಪಾಯಕಾರಿ ಎಂದು ದೇವನೂರು ಮಹಾದೇವ ಅಭಿಪ್ರಾಯಪಡಲು ಕಾರಣಗಳೇನು? ವಿಶ್ಲೇಷಿಸಿ.
2) ಮಾತಿನ ಮಹತ್ವದ ಅರಿವು ಸಂವಹನಕ್ಕೆ ತೀರಾ ಅಗತ್ಯವೆಂಬುದನ್ನು ಲೇಖಕರು ಹೇಗೆ ಪ್ರತಿಪಾದಿಸಿದ್ದಾರೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 1X7=7

1) ಸುಖಭೋಗಗಳ ಜೀವನಕ್ಕೆ ಒಗ್ಗಿ ಹೋಗುತ್ತಿರುವ ಇಂದಿನ ಮನುಷ್ಯನಿಗೆ ಪರಿಸರ ಸಂರಕ್ಷಣೆ ಸಾಧ್ಯವೇ? ವಿವೇಚಿಸಿ.
2) ದುಶ್ಚಟಗಳು ಕುಟುಂಬ ಹಾಗೂ ಸಮಾಜದ ಮೇಲೆ ಬೀರುವ ಪರಿಣಾಮಗಳೇನು? ವಿವರಿಸಿ.

III. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1X6=6

1) ಸಭಾಕಂಪನವನ್ನು ಹೋಗಲಾಡಿಸಲು ಹೇಗೆ ಪ್ರಯತ್ನಿಸಬೇಕು? ಯಾವ ಸೂತ್ರಗಳನ್ನು ಅನುಸರಿಸಬೇಕು? ವಿವರಿಸಿ.

2) ಗಾದೆ ಎಂದರೇನು? ಅವುಗಳ ಮಹತ್ವವನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 1X3=3

1) ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ – ಈ ಗಾದೆಯನ್ನು ವಿವರಿಸಿ.

2) ಉತ್ತಮ ಭಾಷಣದ ಪಂಚಸೂತ್ರಗಳಾವುವು? ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ. 1X10=10

1) ಕಸದ ತೊಟ್ಟಿಯಂತೆ ಕೊಳೆತು ನಾರುವ ಸಾಮಾಜಿಕ – ರಾಜಕೀಯ ವ್ಯವಸ್ಥೆಯ ವಾಸ್ತವ ದರ್ಶನವನ್ನು ತೊಟ್ಟಿ ಕಾದಂಬರಿ ಹೇಗೆ ಮಾಡಿಸುತ್ತದೆ? ವಿವರಿಸಿ.

2) ತೊಟ್ಟಿಯ ಸ್ಥಳಾಂತರದಿಂದ ಉಂಟಾದ ಸಮಸ್ಯೆಗಳೇನು? ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ. 1X5=5

1) ಬಾಳಪ್ಪನ ಪಾತ್ರವನ್ನು ಪರಿಚಯಿಸಿ.

2) ಮಾಲತಿ ಪಾತ್ರದ ಪರಿಚಯ ಮಾಡಿ.

V. ಅ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2X3=6

1) ಕರ್ಣ

2) ಬಸವಣ್ಣ

3) ಬಿ.ಎಂ.ಶ್ರೀ

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ. 1X5=5

1) ಪಂಪ ಕವಿಯ ಆಶ್ರಯಧಾತ ಯಾರು?

2) ಹುತ್ತರಿ ಹಬ್ಬದ ಆಚರಣೆಯನ್ನು ಯಾರು ಮಾಡುತ್ತಾರೆ?

3) ದೇವನೂರು ಮಹಾದೇವರ ಎರಡು ಕೃತಿಗಳಾವುವು?

4) ತೊಟ್ಟಿ ಕಾದಂಬರಿಯನ್ನು ಬರೆದವರ್‍ಯಾರು?

5) ಅಲ್ಪರ ಸಂಗ.......ಈ ಗಾದೆ ಮಾತು ಪೂರ್ಣಗೊಳಿಸಿ.

**********

KAN 301.1 Reg. No. ..................................

# ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ

## ಅಕ್ಟೋಬರ್ 2013

## ಕನ್ನಡ ಭಾಷಾ ಪತ್ರಿಕೆ – III

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

### ಪದ್ಯಭಾಗ

I. ಅ) ಈ ಪದ್ಯ ಭಾಗಗಳಲ್ಲಿ ಒಂದರ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿ: 1x5=5

1) ಗಂಗಾಸುತಂ ಪೃಥಾಸುತ
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್।
ಗಾಂಗೆಯನಳಿದೊಡಹಿತರ
ನಾಂಗೆಲೆ ತಳ್ತಿರಿವೆನನ್ನೆಗಂ ಬಿಲ್ಬಿಡಿಯೆಂ॥

2) ಮನೆಯೊಳಗೆ ಮನೆಯೊಡಯನಿದ್ದಾನೊ, ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೋ?
ಇಲ್ಲ, ಕೂಡಲ ಸಂಗಮದೇವಾ।

ಆ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಿಸಿ: 2x3=6

1) ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ
2) ನಾಡೆ ಪಾಡಳಿದಿರ್ದಳ್
3) ಸವಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 1x10=10

1) ರಾವಣನ ಪರಾಂಗನಾವಿರತಿ ವ್ರತವು ನಾಗಚಂದ್ರನ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿವೇಚಿಸಿ.
2) ಕೊಡವರ ಸಂಸ್ಕೃತಿಯನ್ನು 'ಹುತ್ತರಿ ಹಾಡು'ವಿನಲ್ಲಿ ಹೇಗೆ ಪರಿಚಯಿಸಲಾಗಿದೆ? ವಿಶ್ಲೇಷಿಸಿ.

ಈ) ಒಂದು ಪ್ರಶ್ನೆಗೆ ಉತ್ತರಿಸಿ: 1x7=7

1) ರಾವಣನ ಉದಾತ್ತ ವ್ಯಕ್ತಿತ್ವವು ನಾಗಚಂದ್ರನ ಪದ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿಶ್ಲೇಷಿಸಿ.
2) ಕೊಡವರ ಆಚಾರ–ವಿಚಾರಗಳನ್ನು 'ಹುತ್ತರಿ ಹಾಡು' ಕವನದಲ್ಲಿ ಹೇಗೆ ವಿಶ್ಲೇಷಿಸಲಾಗಿದೆ? ವಿವರಿಸಿ.

### ಗದ್ಯಭಾಗ

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 1x10=10

1) ಜನಾಂಗಭೇದದ ಬಗ್ಗೆ ದೇವನೂರ ಮಹಾದೇವರ ನಿಲುವುಗಳೇನು? ವಿವೇಚಿಸಿ.
2) ದುಶ್ಚಟಗಳ ನಿರ್ಮೂಲನೆಯಲ್ಲಿ ವ್ಯಕ್ತಿ ಮತ್ತು ಸರ್ಕಾರಗಳ ಪಾತ್ರ ಹೇಗಿರಬೇಕು? ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿ: 1x7=7

1) ಮಾತು ಮತ್ತು ಸಂವಹನಕ್ಕಿರುವ ಸಂಬಂಧವೇನು? ವಿವರಿಸಿ.
2) ಪರಿಸರವನ್ನು ಮನುಷ್ಯ ಏಕೆ ಮತ್ತು ಹೇಗೆ ಸಂರಕ್ಷಿಸಬೇಕು? ವಿವೇಚಿಸಿ.

## ಕಾದಂಬರಿ

**III.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: **1x10=10**

1) ಪತ್ರಿಕಾ ವರದಿಗಾರ ಬಾಳಪ್ಪನ ಸಾಮಾಜಿಕ ಹೋರಾಟವನ್ನು ತೊಟ್ಟಿ ಕಾದಂಬರಿಯಲಿ ಹೇಗೆ ಚಿತ್ರಿಸಲಾಗಿದೆ? ವಿವೇಚಿಸಿ.
2) ತೊಟ್ಟಿಯ ಸ್ಥಳಾಂತರದ ವಿಚಾರವೇ ಒಂದು ಕಗ್ಗಂಟಾಗಲು ಕಾರಣಗಳೇನು? ಕಾದಂಬರಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: **1x5=5**

1) ಊದುಬತ್ತಿಯ ಹೊಗೆಯ ಪ್ರಸಂಗವು ಕಾದಂಬರಿಯಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.
2) ಶ್ರೀಮತಿ ಶ್ರೀವಾಸ್ತವ ಇವರ ಪಾತ್ರವನ್ನು ಕಾದಂಬರಿಯಲ್ಲಿ ಹೇಗೆ ಚಿತ್ರಿಸಲಾಗಿದೆ? ವಿವರಿಸಿ.

## ಕ್ರಿಯಾತ್ಮಕ ಕನ್ನಡ

**IV.** ಅ) ಒಂದು ಪ್ರಶ್ನೆಗೆ ಉತ್ತರಿಸಿ: **1x6=6**

1) ಸಭಾಕಂಪನಕ್ಕೆ ಕಾರಣಗಳೇನು? ಅದನ್ನು ಮೀರುವ ಬಗೆ ಹೇಗೆ? ವಿವರಿಸಿ.
2) ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ನಾಣ್ನುಡಿ ಬರಲು ಕಾರಣಗಳೇನು? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: **1x3=3**

1) ಉತ್ತಮ ಭಾಷಣದ ಪಂಚಸೂತ್ರಗಳು ಯಾವುವು?
2) ಅಮ್ಮ ಪಟ್ಟಕ್ಕೆ ಬರುವಾಗ ಅಪ್ಪ ಚಟ್ಟಕ್ಕೆ — ಈ ಗಾದೆ ಮಾತನ್ನು ಹೇಗೆ ಅರ್ಥೈಸುತ್ತೀರಿ? ವಿವರಿಸಿ.

**V.** ಅ) ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ: **2x3=6**

1) ಕರ್ಣ–ದ್ರೋಣರ ಜಾತಿ ಕಲಹ
2) ವಿಭೀಷಣ
3) ಅಸ್ಪೃಶ್ಯರು

ಆ) ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ: **5x1=5**

1) ಪಂಪನ ಕಾವ್ಯಗಳು ಯಾವುವು?
2) ನಳಕೂಬರನ ಹೆಂಡತಿಯ ಹೆಸರೇನು?
3) ಬಸವಣ್ಣನ ಅಂಕಿತ ನಾಮವೇನು?
4) 'ಒಡಲಾಳ' ಇದು ಯಾರು ಬರೆದ ಕೃತಿ?
5) ಡಾ.ನಾ. ಮೊಗಸಾಲೆಯವರ ಯಾವುದಾದರೊಂದು ಕೃತಿಯನ್ನು ಹೆಸರಿಸಿ.

**********

(13)

KAN 301.1

**ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ–3**

**ಸಮಯ: 3 ಘಂಟೆ** **ಅಂಕಗಳು: 80**

I (ಅ) **ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ಎನ್ನನೆ ನಚ್ಚಿದನನುವರ
ಕೆನ್ನನೆ ಪೂಣಿಸಿದನೆನಗೆರಟ್ಟಿಂಡಮುವೋ
ರನ್ನರೆದವೆಂತು ಕಾದುವೆ
ನೆನ್ನಯ ಮಕ್ಕಳೊಳಮೆನ್ನ ಮೊಮ್ಮಕ್ಕಳೊಳಂ.

(2) ಎನಿಸುಕಾಲ ಕಲ್ಲು ನೀರೊಳಗಿದ್ದಡೇನು?
ನೆನೆದು ಮೃದುವಾಗಬಲ್ಲುದೇ?
ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಢವಿಲ್ಲದನ್ನಕ್ಕ?
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು ಕೂಡಲಸಂಗಮದೇವಾ.

ಆ) **ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ನಾಲಗೆ ಕುಲಮಂ ತುಬ್ಬುವವೋಲುರದೆ ನೀಂ ಕೆಡೆನುಡಿವೈ.

(2) ಅಲರಂಬುಗಳುರ್ಚೆ ನಾಡೆ ಪಾಡಳಿದಿರ್ದಳ್

(3) ಎಲ್ಲಿ ನೆಲವನು ತಣಿಸಿ, ಜನಮನ ಹೊಲದ ಕಳೆಕಳೆ ಕಳೆವಳೋ.

ಇ) **ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಉಪರಂಬೆಯ ರೂಪಕ್ಕೆ ಮಾರುಹೋಗದೆ ರಾವಣನು ತನ್ನ ದೃಢತೆ ಹಾಗೂ ಚಾರಿತ್ರ್ಯವನ್ನು ಹೇಗೆ ಪ್ರತಿಪಾದಿಸುತ್ತಾನೆ?

(2) ನಿರ್ಮಲವಾದ ಭಕ್ತಿಯ ಮಹತ್ವವನ್ನು ಬಸವಣ್ಣ ಹೇಗೆ ಚಿತ್ರಿಸಿದ್ದಾನೆ?

ಈ) **ಒಂದು ಪ್ರಶ್ನೆಗೆ ಉತ್ತರಿಸಿರಿ** 7

(1) ಕರ್ಣನು ತನ್ನ ಬಗ್ಗೆ ಎತ್ತಿದ ಆಕ್ಷೇಪಗಳಿಗೆ ಭೀಷ್ಮನು ಹೇಗೆ ಪ್ರತಿಕ್ರಿಯಿಸುತ್ತಾನೆ? ವಿವರಿಸಿ.

(2) 'ಪ್ರಾರ್ಥನೆ' ಕವಿತೆಯ ಆಶಯವೇನು? ವಿವರಿಸಿರಿ.

II ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 10

(1) ದಕ್ಷಿಣ ಆಫ್ರಿಕಾದ ಜನಾಂಗ ಭೇದಕ್ಕೂ ಭಾರತದ ಅಸ್ಪೃಶ್ಯತೆಗೂ ಇರುವ ಸಾಮ್ಯ ಮತ್ತು ವ್ಯತ್ಯಾಸಗಳನ್ನು ಲೇಖಕರು ಪ್ರಬಂಧದಲ್ಲಿ ಹೇಗೆ ವಿಶ್ಲೇಷಿಸಿದ್ದಾರೆ? ವಿವೇಚಿಸಿ.

(2) ಭಾರತದಲ್ಲಿ ಪರಿಸರ ಸಂರಕ್ಷಣೆಗೆ ಎದುರಾಗುತ್ತಿರುವ ಸವಾಲುಗಳೇನು? ಅವುಗಳಿಗೆ ಇರುವ ಪರಿಹಾರಗಳೇನು? ವಿಶ್ಲೇಷಿಸಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಸಂವಹನದಲ್ಲಿ ಮಾತಿಗೆ ಇರುವ ಮಹತ್ವವೇನು? ವಿವರಿಸಿ.

(2) ಮನುಷ್ಯನ ಬದುಕಿನ ಮೇಲೆ ದುಶ್ಚಟಗಳು ಬೀರುವ ಪರಿಣಾಮಗಳೇನು? ವಿಶ್ಲೇಷಿಸಿ.

**III ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** **10**

(1) ಕೊಳೆತು ಹೋದ ಸಮಾಜದಲ್ಲಿ ಆದರ್ಶವಾದಿ ಹೋರಾಟಗಾರನು ಎದುರಿಸುವ ಸಮಸ್ಯೆಗಳನ್ನು ಕಾದಂಬರಿಯಲ್ಲಿ ಹೇಗೆ ಚಿತ್ರಿಸಲಾಗಿದೆ? ವಿಶ್ಲೇಷಿಸಿ.

(2) ಕಸದ ತೊಟ್ಟಿಯ ಎತ್ತಂಗಡಿಯು ದಿನ ದಿನಕ್ಕೆ ದೊಡ್ಡ ಸಮಸ್ಯೆಯಾಗಿ ರೂಪಿತವಾಗುವ ಹಿನ್ನೆಲೆಯ ಕಾರಣಗಳನ್ನು ಕಾದಂಬರಿಯಲ್ಲಿ ಹೇಗೆ ವಿಶ್ಲೇಷಿಸಲಾಗಿದೆ? ವಿವೇಚಿಸಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **5**

(1) ಕಾದಂಬರಿಯಲ್ಲಿ ಬರುವ ಇನ್ಸ್ಪೆಕ್ಟರ್ ರಾಮಸ್ವಾಮಿ ಪಾತ್ರವನ್ನು ಪರಿಚಯಿಸಿ.

(2) ಕಸದ ತೊಟ್ಟಿಯಿಂದ ಬರುತ್ತಿದ್ದ ದುರ್ವಾಸನೆಯ ಹಿನ್ನೆಲೆಯೇನು? ವಿವರಿಸಿ.

**IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **6**

(1) ಉತ್ತಮ ಭಾಷಣಕಾರ ಅನುಸರಿಸಬೇಕಾದ ಪಂಚಸೂತ್ರಗಳು ಯಾವುವು? ವಿವರಿಸಿ.

(2) ಗಾದೆಗಳನ್ನು ಜನಪದ ವೇದಗಳೆಂದು ಏಕೆ ಕರೆಯುತ್ತಾರೆ? ಗಾದೆಗಳ ಮಹತ್ವದ ಹಿನ್ನೆಲೆಯಲ್ಲಿ ವಿವೇಚಿಸಿ.

**ಆ) ಒಂದು ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿರಿ** **3**

(1) ಸಭಾಕಂಪನಕ್ಕೆ ಕಾರಣಗಳೇನು? ವಿವರಿಸಿ.

(2) ಪಡೆನುಡಿ ಎಂದರೇನು? ಉದಾಹರಣೆಯೊಂದಿಗೆ ವಿವರಿಸಿ.

**V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **6**

(1) ಭೀಷ್ಮನ ಯುದ್ಧ ಪ್ರತಿಜ್ಞೆ

(2) ಉಪರಂಭೆ

(3) ಪಂಪ

**ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ** **5**

(1) ಪಂಪ ಕವಿಗೆ ಆಶ್ರಯಕೊಟ್ಟ ರಾಜ ಯಾರು?

(2) ನಾಗಚಂದ್ರನು ರಚಿಸಿರುವ ಕಾವ್ಯಗಳಾವುವು?

(3) ಬಸವಣ್ಣನ ಅಂಕಿತನಾಮ ಯಾವುದು?

(4) ಕೇರಳದಲ್ಲಿ ದಲಿತರು ಉಪ್ಪು ಎಂಬ ಪದಕ್ಕೆ ಪರ್ಯಾಯವಾಗಿ ಬಳಸುತ್ತಿದ್ದ ಪದ ಯಾವುದು?

(5) ತೊಟ್ಟಿ ಕಾದಂಬರಿಯ ಘಟನೆಗಳು ಯಾವ ಊರಿನ ಯಾವ ಬೀದಿಯಲ್ಲಿ ನಡೆಯುತ್ತವೆ?

*****

**KAN 301.1**

**ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2015**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 70**

**I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ಗಂಗಾಸುತಂ ಪೃಥಾಸುತ
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್ ।
ಗಾಂಗೇಯನಱಿದೊಡಹಿತರ
ನಾಂ ಗೆಲೆ ತಳ್ತಿಱಿವೆನನ್ನಗಂ ಬಿಲ್ವಿಡಿಯೆಂ ॥

(2) ಪಲವು ದಿನಂ ನಿನ್ನೊಳ್ ತೊ ।
ಟ್ಟೊಲವಿಂದಾ ಚೆನ್ನೆ ನಿನ್ನನನುವರತಂ ಪಂ ॥
ಬಲಿಸುತ್ತುಂ ಚಿತ್ತೋದ್ಭವ ।
ನಲರಂಬುಗಳೂರ್ಚೆ ನಾಡೆ ಪಾಡಱಿದಿರ್ದಳ್ ॥

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ಇದೇಂ ದಾಯಿಗತನಮನ್ ಎಮಗೆ ಅವರ್ ತೋಱಿದಪರ್?

(2) ಮನೆಯೊಳಗೆ ಮನೆಯೊಡೆಯನಿದ್ದಾಗೊ, ಇಲ್ಲವೊ?

(3) ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೋಲ್

**ಇ) ಒಂದು ಪ್ರಶ್ನೆಗೆ ಉತ್ತರಿಸಿರಿ** 8

(1) ಭೀಷ್ಮರ ವ್ಯಕ್ತಿತ್ವದ ಉನ್ನತಿ ಸೂಚ್ಯಿಡೆಯಲಪ್ಪುದು ಕಾಣಾ ಕಾವ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ? ಚಿತ್ರಿಸಿರಿ.

(2) ರಾವಣನು ನಳಕೂಬರನನ್ನು ಸೋಲಿಸಿದ ಸನ್ನಿವೇಶವನ್ನು ಚಿತ್ರಿಸಿರಿ.

(3) 'ಎನಗೆ ವಿದ್ಯೋಪದೇಶಂ ಗೆಯ್ದ ಗುರು' ಕಾವ್ಯಭಾಗದಲ್ಲಿ ಚಿತ್ರಿತವಾಗಿರುವ ರಾವಣನ ವ್ಯಕ್ತಿತ್ವವನ್ನು ವಿವರಿಸಿರಿ.

**ಈ) ಒಂದು ಪ್ರಶ್ನೆಗೆ ಉತ್ತರಿಸಿರಿ** 5

(1) ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾಗಿರುವ ಆಲೋಚನೆಗಳನ್ನು ವಿವರಿಸಿರಿ.

(2) ಕೊಡಗಿನ ಚೆಲುವು – ಆಚಾರ ವಿಚಾರಗಳು ಹುತ್ತರಿ ಹಾಡು ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

**II ಅ) ಎರಡು ಸಾಲುಗಳಿಗೆ ಸಂದರ್ಭ ಸಹಿತ ವಿವರಣೆ ನೀಡಿರಿ.** 6

(1) ತಾರತಮ್ಯವು ಸಮಾಜದಲ್ಲಿ ಆಂತರಿಕವಾಗಿ ವ್ಯಾಪಿಸಿ ಸಹಜ ಪದ್ಧತಿಯಾಗಿ ಬಿಟ್ಟಿವೆ.

(2) ಮಾತು ನಾಗರಿಕತೆಯ ಮತ್ತು ಸಂಸ್ಕೃತಿಯ ಸಂಕೇತ.

(3) ಈ ವಿಷವಸ್ತುಗಳಿಂದ ಆದಷ್ಟು ದೂರವಿರುವುದು ಕ್ಷೇಮ.

**ಆ) ಒಂದು ಪ್ರಶ್ನೆಗೆ ಉತ್ತರಿಸಿರಿ** 8

(1) ಭಾರತದಲ್ಲಿರುವ ಅಸ್ಪೃಶ್ಯತೆ ಹೆಚ್ಚು ಅಪಾಯಕಾರಿ ಎಂಬುದನ್ನು ಲೇಖಕರು ಹೇಗೆ ವಿವರಿಸಿದ್ದಾರೆ?

(2) ಪರಿಸರ ಸಂರಕ್ಷಣೆಯ ಸಮಸ್ಯೆಗಳನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ 5

(1) ಮಾತನಾಡುವುದು ಒಂದು ಕಲೆ – ಲೇಖಕರ ವಿಚಾರಗಳನ್ನು ವಿವರಿಸಿರಿ.

(2) ಮಾದಕ ಪದಾರ್ಥಗಳ ಚಟದಿಂದಾಗುವ ಅಪಾಯಗಳೇನು? ವಿವರಿಸಿರಿ.

III ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 8

(1) 'ತೊಟ್ಟಿ' ಕಾದಂಬರಿ ವಿಕೃತ ಸಮಾಜದ ನಡುವೆ ಆದರ್ಶವಾದಿಯೊಬ್ಬನ ಹೋರಾಟದ ಕತೆಯನ್ನು ಹೇಳುತ್ತದೆ. ವಿವರಿಸಿರಿ.

(2) ಇಡೀ ವ್ಯವಸ್ಥೆಯ ಹೊಲಸನ್ನು ತೊಟ್ಟಿ ಕಾದಂಬರಿ ಹೇಗೆ ಚಿತ್ರಿಸುತ್ತದೆ. ವಿವರಿಸಿರಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ 5

(1) ಸೀತಾಪುರದ ರಂಗಯ್ಯನ ಬೀದಿಯ ಜನತೆ ವಾಸನೆಗೆ ಪ್ರತಿಕ್ರಿಯಿಸಿದ ಸನ್ನಿವೇಶವನ್ನು ವಿವರಿಸಿರಿ.

(2) ತೊಟ್ಟಿಯ ಸ್ಥಳಾಂತರದ ಸನ್ನಿವೇಶವನ್ನು ವಿವರಿಸಿರಿ.

IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ 6

(1) ಉತ್ತಮ ಭಾಷಣ ಹೇಗಿರಬೇಕು? ವಿವರಿಸಿರಿ.

(2) ಗಾದೆಯ ಲಕ್ಷಣ–ವೈಶಿಷ್ಟ್ಯಗಳನ್ನು ವಿವರಿಸಿರಿ.

ಆ) ಒಂದು ವಾಕ್ಯದಲ್ಲಿ ಸಂಕ್ಷಿಪ್ತವಾಗಿ ಉತ್ತರಿಸಿರಿ 3

(1) ಸಭಾಕಂಪನವನ್ನು ಹಿಮ್ಮೆಟ್ಟಿಸುವ ಸೂತ್ರಗಳನ್ನು ತಿಳಿಸಿ.

(2) ಸಂತೃಪ್ತಿ ಔತಣದಷ್ಟೇ ಉತ್ತಮ – ಗಾದೆಯನ್ನು ವಿಸ್ತರಿಸಿ.

V ಅ) ಒಂದು ವಾಕ್ಯದಲ್ಲಿ ಉತ್ತರಿಸಿರಿ 5

(1) ಪಂಪನ ಕೃತಿಗಳನ್ನು ಹೆಸರಿಸಿರಿ.

(2) ಅಭಿನವ ಪಂಪನೆಂದು ಯಾವ ಕವಿ ಪ್ರಖ್ಯಾತನಾಗಿದ್ದಾನೆ?

(3) ಅಲ್ಲಮ ಪ್ರಭುವಿನ ಅಂಕಿತ ನಾಮ ಯಾವುದು?

(4) ಜನಾಂಗೀಯ ಭೇದಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ಮೂರನೇ ವಿಶ್ವ ಸಮ್ಮೇಳನ ಎಲ್ಲಿ ನಡೆಯಿತು?

(5) 'ದ್ಯಾವನೂರು' – ಈ ಕೃತಿಯ ಲೇಖಕ ಯಾರು?

*****

KAN 302.1

ಕ್ರೆಡಿಟ್ ಆಧಾರಿತ ತೃತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2015

ಕನ್ನಡ ಭಾಷಾಪತ್ರಿಕೆ–3

ಸಮಯ: 3 ಘಂಟೆ ಅಂಕಗಳು: 80

I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ 1×5 = 5

(1) ನೆಲಕಿಱುವೆನೆಂದು ಬಗೆವಿರೆ
ಛಲಕಿಱುವೆಂ ಪಾಂಡುಸುತರೊಳೀನೆಲನಿದು ಪಾ ।
ಱ್ನೆಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವಪೆನೇ ॥

(2) ಹಿಂದಣ ಹಳ್ಳ ಮುಂದಣ ತೊರೆ
ಸಲ್ಲುವ ಪರಿಯೆಂತು ಹೇಳಾ!
ಹಿಂದಣ ಕೆರೆ, ಮುಂದಣ ಬಲೆ
ಹದುಳವಿನ್ನೆಲ್ಲಿಯದು ಹೇಳಾ!
ನೀನಿಕ್ಕಿದ ಮಾಯೆ ಕೊಲ್ಲುವೆಪ್ಪುದು
ಕಾಯಯ್ಯಾ, ಕಾಯಯ್ಯಾ ಚೆನ್ನಮಲ್ಲಿಕಾರ್ಜುನಾ

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ 2×3 = 6

(1) ಶ್ವಾನನ ಬಾಲದ ಪ್ರಾಣ ತಗ್ಗಿಸಲೆಂದು ಕೋಣನ ಬಲಿಯಕೊಟ್ಟಂತೆ
(2) ಐಕ್ಯಗಾನದಿ ರಾಷ್ಟ್ರ ತೇಲುತಿರಲಿ
(3) ಕತ್ತಲಿದ್ದರೆ ಅಲ್ಲಿ ನಾನು ಬೆಳಕಿನ ಕೂಲಿ

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ 1×10 = 10

(1) ದುರ್ಯೋದನನ ಪಾತ್ರವನ್ನು ರನ್ನ ಕವಿ ಹೇಗೆ ಉದಾತ್ತೀಕರಣಗೊಳಿಸಿದ್ದಾನೆ? ವಿವೇಚಿಸಿ.
(2) ಜಾತಿ–ಧರ್ಮಗಳ ಕಂದಕವನ್ನು ಮುರಿದು ಐಕ್ಯತೆಯ ರಾಷ್ಟ್ರವನ್ನು ಕಟ್ಟಬೇಕೆಂಬ ಆಶಯವು 'ಐಕ್ಯಗಾನ'ದಲ್ಲಿ ಹೇಗೆ ವ್ಯಕ್ತವಾಗಿದೆ? ವಿಶ್ಲೇಷಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ 1×7 = 7

(1) ಮನುಷ್ಯನ ಮನಸ್ಸಿನ ಹೊಯ್ದಾಟವನ್ನು ಅಕ್ಕಮಹಾದೇವಿ ಹೇಗೆ ಚಿತ್ರಿಸಿದ್ದಾಳೆ? ವಿವರಿಸಿ.
(2) ಪುರುಷ ಪ್ರಧಾನ ವ್ಯವಸ್ಥೆಯನ್ನು ಚಂಡಶಾಸನ ಕವನದಲ್ಲಿ ಹೇಗೆ ಪ್ರಶ್ನಿಸಲಾಗಿದೆ? ವಿಶ್ಲೇಷಿಸಿ.

II ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ 1×10 = 10

(1) ಜನರಲ್ಲಿ ವೈಚಾರಿಕ ಮನೋಭಾವವನ್ನು ಹೇಗೆ ಮೂಡಿಸಬೇಕೆಂದು ಎಚ್. ನರಸಿಂಹಯ್ಯನವರು ಕರೆನೀಡಿದ್ದಾರೆ? ವಿವರಿಸಿ.
(2) ಸಸ್ಯ ಸಂಕುಲದೊಂದಿಗೆ ಮನುಷ್ಯ ಸಂಬಂಧಗಳ ಸೂಕ್ಷ್ಮಗಳನ್ನು ನಾಗೇಶ ಹೆಗಡೆಯವರು ಹೇಗೆ ಅನಾವರಣಗೊಳಿಸಿದ್ದಾರೆ? ವಿವೇಚಿಸಿ.

ಆ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 1×7 = 7

(1) ಅಧ್ಯಾಪಕರು ವಿದ್ಯಾರ್ಥಿಗಳ ಮನಸ್ಸನ್ನು ಹೇಗೆ ಅರಿಯಬೇಕೆಂದು ಬಿ.ಜಿ.ಎಲ್. ಸ್ವಾಮಿಯವರು ಅಭಿಪ್ರಾಯ ಪಡುತ್ತಾರೆ? ವಿವರಿಸಿ.

(2) ಗಾಂವ್ ಕಾ ಶೇರ್ ಲೇಖನದ ಸ್ವಾರಸ್ಯ ವಿವರಿಸಿ.

III ಅ) **ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿರಿ** 1×10 = 10

(1) ಗ್ರಾಮೀಣ ಬದುಕಿನ ನಿರಕ್ಷರಸ್ಥ ಸ್ತ್ರೀ ಸಮಾಜದ ಚಿಂತನೆಗಳನ್ನು ತೇಜಸ್ವಿಯವರು ಕಾದಂಬರಿಯಲ್ಲಿ ಹೇಗೆ ಚಿತ್ರಿಸಿದ್ದಾರೆ?

(2) ಬಿರುಗಾಳಿಗೆ ಮುರಿದು ಬಿದ್ದ ಹೆಬ್ಬಲಸಿನ ಮರದ ಘಟನೆಯ ಅವಾಂತರಗಳೇನು ವಿಶ್ಲೇಷಿಸಿ.

ಆ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 1×7 = 7

(1) ಕಾದಂಬರಿಯಲ್ಲಿ ಪುರುಷ ಪಾತ್ರಗಳನ್ನು ತೇಜಸ್ವಿ ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

(2) ದಾನಮ್ಮನ ಗಟ್ಟಿ ವ್ಯಕ್ತಿತ್ವವನ್ನು ಕಾದಂಬರಿಯಲ್ಲಿ ಹೇಗೆ ಅಭಿವ್ಯಕ್ತಿಸಲಾಗಿದೆ? ವಿಶ್ಲೇಷಿಸಿ.

IV ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 1×6 = 6

(1) ಅಭ್ಯರ್ಥನ ಪತ್ರ ಎಂದರೇನು? ಮಾದರಿ ಪತ್ರದೊಂದಿಗೆ ವಿವರಿಸಿ.

(2) ಸಂದರ್ಶನ ಎಂದರೇನು? ಸಂದರ್ಶಕ ಸಂದರ್ಶನವನ್ನು ಹೇಗೆ ನಡೆಸಬೇಕು? ವಿವರಿಸಿ.

V ಅ) **ಇವುಗಳಲ್ಲಿ ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ.** 2×3 = 6

(1) ಭೀಷ್ಮಾಚಾರ್ಯ

(2) ಬೆಳಕಿನ ಕೂಲಿ

(3) ಅಕ್ಕಮಹಾದೇವಿ

ಆ) **ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ** 6×1 = 6

(1) ಶಕ್ತಿಕವಿಯೆಂದು ಯಾರನ್ನು ಕರೆಯುತ್ತಾರೆ?

(2) ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಡಿದ ಕವಿ ಯಾರು?

(3) ನಾಗೇಶ ಹೆಗಡೆಯವರು ವಿಜ್ಞಾನ ವಿಶೇಷಾಂಕವನ್ನು ಯಾವ ಪತ್ರಿಕೆಯಲ್ಲಿ ಬರೆಯುತ್ತಿದ್ದರು?

(4) ದೇವನೂರು ಮಹಾದೇವರ ಎರಡು ಕೃತಿಗಳನ್ನು ಹೆಸರಿಸಿರಿ.

(5) 'ಯಕ್ಷಗಾನದ ವಾಲ್ಮೀಕಿ' ಎಂದು ಯಾರನ್ನು ಕರೆಯಲಾಗುತ್ತದೆ.

(6) 'ಚಿದಂಬರ ರಹಸ್ಯ' ಯಾರು ಬರೆದ ಕಾದಂಬರಿ?

*****